**O.S No. 182/2018**

ಪಿ.ಡಬ್ಲ್ಯೂ-1

ದಿನಾಂಕ **19.09.2022** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್ ಕೆ / ಜಿ ಕೆ ವಕೀಲರಿಂದಃ

**1.** ನನಗೆ ಪ್ರತಿವಾದಿಗಳ ಪರಿಚಯು ಇರುತ್ತದೆ. ಪಕ್ಕದ ಮನೆಯವರು ಇರುತ್ತಾರೆ. ಪ್ರತಿವಾದಿಯ ತಂದೆ ಮಂಜಾನಾಯಕ್ ಇವರಿಗೆ **8** ಜನ ಗಂಡು ಮಕ್ಕಳು ಹಾಗೂ **4** ಜನ ಹೆಣ್ಣು ಮಕ್ಕಳು ಇರುತ್ತಾರೆ. ಸದರಿ **12** ಜನರನ್ನು ನಾನು ಪ್ರತಿವಾದಿಗಳನ್ನಾಗಿ ಮಾಡಿಲ್ಲ ಎಂದರೆ ಸರಿ . ಸದರಿ ದಾವೆಯನ್ನು ಜಮೀನು ಬರಬೇಕೆಂದು ಹಾಕಿರುತ್ತೇನೆ.

**2.** ನಾನು ಸರ್ವೆ ನಂ. **11** ರ ಮೇಲೆ ನಾನು ದಾವೆ ಹಾಕಿರುತ್ತೇನೆ. ನನ್ನ ಜಮೀನು ಸರ್ವೆ ನಂ. **9** ಇರುತ್ತದೆ. ನನಗೆ ಸರ್ವೆ ನಂ. **11** ರ ಚೆಕ್ಕುಬಂದಿ ಹೇಳಲು ಬರುತ್ತದೆ. ಸರ್ವೆ ನಂ. **9** ರ ಚೆಕ್ಕುಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ನಾಗಮ್ಮ ಜಮೀನು , ಪಶ್ಚಿಮಕ್ಕೆ ಸರ್ವೆ ನಂ. **11** , ಉತ್ತರಕ್ಕೆ ಅರಣ್ಯ ಜಮೀನು , ದಕ್ಷಿಣಕ್ಕೆ ಅಣ್ಣಪ್ಪನ ಜಾಗ ಬರುತ್ತದೆ.

**3.** ನಾನು ಒಂದೇ ಶೆಡ್ಯೂಲ್ ಅನ್ನು ತೋರಿಸಿರುತ್ತೇನೆ. ದಾವಾ ಶಡ್ಯೂಲ್ ಸ್ವತ್ತು ಒಟ್ಟು **2** ಎಕರೆ **16** ಗುಂಟೆ ಇರುತ್ತದೆ. ದಾವಾ ಶಡ್ಯೂಲ್ ಸ್ವತ್ತು ನನ್ನ ತಂದೆ ಲೋಕಾನಾಯಕ್ ಇವರು **1958** ರಲ್ಲಿ ಖರೀದಿ ಮಾಡಿರುತ್ತಾರೆ. ನನಗೆ ಆಗ ಸುಮಾರು **1** ವರ್ಷ , **2** ವರ್ಷ ಆಗಿರಬಹುದು. ಸದರಿ ದಾಖಲೆಗಳನ್ನು ಪರಿಶೀಲನೆ ಮಾಡುವ ಪ್ರಯತ್ನ ಮಾಡಿಲ್ಲ , ನನಗೆ ಆ ಬಗ್ಗೆ ಗೊತ್ತಾಗಿಲ್ಲ , ನನ್ನ ತಂದೆ ನೋಡಿಕೊಳ್ಳುತ್ತಿದ್ದರು.

**4.** ಮಂಜಾನಾಯಕ್ ಇವರಿಗೆ ಯಾವಾಗ ಜಮೀನು ಮಂಜೂರಾಗಿತ್ತು ಎಂದು ನನಗೆ ಗೊತ್ತಿಲ್ಲ. ಮಂಜಾನಾಯಕ್ ಇವರಿಗೆ ದರಾಕಾಸ್ತು ಮೂಲಕ ಮಂಜೂರಾಗಿತ್ತು ಎಂದರೆ ಇರಬಹುದು. ಮಂಜೂರಾತಿ ಆದ ಬಗ್ಗೆ ಯಾವುದೇ ಆರ್ ಟಿ ಸಿ , ಕ್ರಯಪತ್ರಗಳು , ಪಹಣಿ ಮಂಜಾನಾಯಕ್ ಅವರ ಹೆಸರಿನಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮಾರಾಟ ಮಾಡುವವರ ಹೆಸರಿನಲ್ಲಿ ಪಹಣಿ, ಮ್ಯುಟೇಷನ್ ಇರಬೇಕೆಂದರೆ ಸಾಕ್ಷಿಯು ಅವುಗಳೆಲ್ಲಾ ಇದ್ದೇ ಮಾಡಿರುತ್ತಾರೆಂದು ನುಡಿಯುತ್ತಾರೆ. ಆ ಸಂಬಂಧ ಆರ್ ಟಿ ಸಿ ಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

**5.** ಕ್ರಯಪತ್ರಕ್ಕೆ ಸಾಕ್ಷಿದಾರರಾಗಿ ಜಂಬಳ್ಳಿ ಶಾಂತವೀರಪ್ಪಗೌಡ , ಕುರಂಬಳ್ಳಿಯ ಯಲ್ಲಾನಾಯಕ್ ಇದ್ದರು. ನನ್ನ ತಂದೆ ಸಹಿ ಮಾಡುತ್ತಿದ್ದರು. ಮಂಜಾನಾಯಕ್ ಇವರು ಸಹಿ ಮಾಡುತ್ತಿದ್ದರೋ , ಹೆಬ್ಬಟ್ಟು ಹಾಕುತ್ತಿದ್ದರೋ ನನಗೆ ಗೊತ್ತಿಲ್ಲ. ನಾನು ಖರೀದಿ ಪತ್ರವನ್ನು ಓದಿರುವುದಿಲ್ಲ. ಮಂಜಾನಾಯಕ್ ಇವರು ಯಾವುದೇ ಪತ್ರವನ್ನು ಬರೆದುಕೊಟ್ಟಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ತಂದೆ ಮಂಜಾನಾಯಕ್ ಇವರು ಅಂಗವಿಕಲರು ಎಂದರೆ ಸರಿಯಲ್ಲ. ಅವರಿಗೆ ಅಂಗವಿಕಲರ ವೇತನ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.

**6.** **8** ನೇ ಪ್ರತಿವಾದಿ ನನ್ನ ಮೇಲೆ ಶಾಶ್ವತ ನಿರ್ಭಂಧಕಾಜ್ಞೆ ದಾವೆ ಹಾಕಿದ್ದರು ಎಂದರೆ ಸರಿಯಲ್ಲ. ನಾನು ಸದರಿ ಪ್ರಕರಣದಲ್ಲಿ ಸಾಕ್ಷಿ ನೀಡುವ ಕಾಲಕ್ಕೆ ಮಂಜಾನಾಯಕ್ ಇವರಿಗೆ ಒಂದು ಎಡಗೈ ಇಲ್ಲ ಮತ್ತು ಕಾಲು ಇಲ್ಲ ಎಂದು ಒಪ್ಪಿಕೊಂಡಿದ್ದೇನೆಂದರೆ ಸರಿಯಲ್ಲ.

**7.** ದಿಃ **03.02.2016** ರಲ್ಲಿ ನಾನು ಸರ್ವೆ ಗೆ ಅರ್ಜಿ ನೀಡಿರುತ್ತೇನೆ. ಸರ್ವೆ ಮಾಡುವ ಕಾಲಕ್ಕೆ ಸದರಿ ಜಮೀನಿನ ಸ್ವಾಧೀನ ನಾನೇ ಇದ್ದೆ. ಸರ್ವೆ ಕಾಲಕ್ಕೆ **5-6** ಜನ ಇದ್ದರು. ಸರ್ವೆಯರ್ ಮಹಜರ್ ಮಾಡುತ್ತಾರೆಂದರೆ ಸರಿ . ಅಲ್ಲಿ ಹಾಜರಿರುವವರ ಸಹಿ ಪಡೆಯುತ್ತಾರೆಂದರೆ ಸರಿ .

**8.** ಗೋವಿಂದಪ್ಪ ನನ್ನ ತಮ್ಮ ಎಂದರೆ ಸರಿ . ತೀರ್ಥಪ್ಪ ನನ್ನ ಅಣ್ಣ . ಕೆ ಎ ಸುಬ್ಬಾನಾಯಕ್ ನನ್ನ ಮಾವ . ಅವರ ಸಹಿಗಳನ್ನು ಹೊರತುಪಡಿಸಿ ನಿಪಿ-**6** ರಲ್ಲಿ ಸರ್ವೆ ನಂ. **9** ಕ್ಕೆ ಸಂಬಂಧಿಸಿದಂತೆ ಬೇರೆಯವರ ಸಹಿ ಇಲ್ಲ ಎಂದರೆ ಸಾಕ್ಷಿಯು ನನಗೆ ಸರಿಯಾಗಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

**ಓ.ಕೇ. ಸ. ಇ .ಎ . ಒ**

ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ ದ ನ್ಯಾ ದಂ,. ನ್ಯಾಯಾಲಯ
ಹೊಸನಗರ